**OS- 275/2018 P.W.1**

ದಿನಾಂಕಃ05.04.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲು</u> ಃ** ಪ್ರತಿವಾದಿಯ ಪರ ವಕೀಲರಿಂದ ಃ-

ನಾನು 3 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ವಿದ್ಯಾಭ್ಯಾಸವನ್ನು ಬೆಟ್ಟತಾವರೆ ಕೆರೆಯಲ್ಲಿ ಮಾಡಿರುತ್ತೇನೆ. ನಮ್ಮ ತಂದೆ ತಾಯಿ ಮದುವೆಯಾದ ನಂತರ ಕೋರನಹಳ್ಳಿಯಲ್ಲಿ ವಾಸವಾಗಿದ್ದರು. ಕೋರನಹಳ್ಳಿಯಲ್ಲಿ ಸುಮಾರು 25 ವರ್ಷಗಳ ಕಾಲ ನನ್ನ ತಂದೆ ತಾಯಿ ಜೊತೆಯಾಗಿ ವಾಸವಾಗಿದ್ದರು. ನನಗೆ 5 ವರ್ಷ ವಯಸ್ಸು ಇದ್ದಾಗ ನನ್ನ ತಂದೆ ಊರು ಬಿಟ್ಟು ಹೋಗಿರುತ್ತಾರೆ. ನನ್ನ ತಂದೆ ಊರು ಬಿಟ್ಟು ಹೋದ ನಂತರ ನಾನು ಕೋರನಹಳ್ಳಿಯಲ್ಲಿ ನನ್ನ ತಾಯಿಯ ಜೊತೆ ವಾಸವಾಗಿದ್ದೇವು. ನಮ್ಮ ತಂದೆ ಊರು ಬಿಟ್ಟು ಹೋದ ನಂತರ ನಾವು ಬೆಟ್ಟತಾವರೆ ಕೆರೆಯಲ್ಲಿ ವಾಸವಾಗಿದ್ದೇವು ಎಂದರೆ ಸರಿ. ದಾವಾ ಆಸ್ತಿಗಳನ್ನು ನಮ್ಮ ತಂದೆ ಅವರು ಮದುವೆ ಮಾಡಿಕೊಳ್ಳುವ ಸಲುವಾಗಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ವಿದ್ಯಾಭ್ಯಾಸ ಮಾಡಿರುವ ಬಗ್ಗೆ ಶಾಲಾ ದಾಖಲಾತಿಗಳು ಇವೆ.

ನಮ್ಮ ತಂದೆ ಮದುವೆಯಾದ ನಂತರ ನಮ್ಮ ಕುಟುಂಬವನ್ನು ಬಿಟ್ಟು ಹೋಗಿರುತ್ತಾರೆ ಎಂದರೆ ಸರಿಯಲ್ಲ. ರೇವಣಸಿದ್ದಪ್ಪ ರವರೇ ದಾವಾ ಆಸ್ತಿಗಳ ಸ್ವಾಧೀನದಲ್ಲಿ ಇದ್ದು ವ್ಯವಸಾಯ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 1 ಮತ್ತು 2 ಸ್ವತ್ತನ್ನು ನನ್ನ ತಂದೆ ರುದ್ರಪ್ಪ ಬಿನ್ ಸಣ್ಣ ಬಸಪ್ಪ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನಾವು ಒಟ್ಟು ಕುಟುಂಬದಲ್ಲಿ ಇರುವಾಗ ನಮ್ಮ ತಂದೆ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆನಂತರ ರೇವಣಸಿದ್ದಪ್ಪ ರವರು ಗೇಣಿ ಅರ್ಜಿ ನೀಡಿ ಅವರ ಹೆಸರಿಗೆ ದಾವಾ ಐಟಂ ನಂಬರ್ 1 ಮತ್ತು 2 ಸ್ವತ್ತುಗಳ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿವಾದವು ನ್ಯಾಯಾಲಯದಲ್ಲಿ 10 ವರ್ಷಗಳ ಕಾಲ ಇತ್ಯರ್ಥಕ್ಕೆ ಬಾಕಿ ಇತ್ತು ಎಂದರೆ ಸಾಕ್ಷಿ ನಾವು

ಸಹ ಸದರಿ ದಾವೆಯನ್ನು ನಡೆಸಿದ್ದೇವು ಎಂದು ಸಾಕ್ಷ್ಯ ನುಡಿಯುತ್ತಾರೆ. ದಾವಾ ಐಟಂ ನಂಬರ್ 4 ರಿಂದ 7 ಆಸ್ತಿಗಳಿಗೆ ಸಂಬಂಧಪಟ್ಟಂತೆ ನನ್ನ ತಂದೆಯವರು ವಿಭಾಗ ಮಾಡಿಕೊಂಡು ಅದರ ಬಾಬ್ತು ಪ್ರತಿವಾದಿಗಳ ತಂದೆಯಿಂದ ಹಣವನ್ನು ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 3 ಸ್ವತ್ತು 4 ನೇ ಪ್ರತಿವಾದಿಯು ತನ್ನ ಸ್ವಂತ ಸಂಪಾದನೆಯಿಂದ ಕೊಂಡುಕೊಂಡ ಸ್ವತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನಗಾಗಲೀ ನನ್ನ ತಂದೆ ತಾಯಿಗಾಗಲೀ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಮ್ಮ ಒಟ್ಟು ಕುಟುಂಬ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯಿಂದ ಅಕ್ರಮವಾಗಿ ಹಣ ಪಡೆಯುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಾಕಾಶ ಕೋರಿದ್ದು, ನ್ಯಾಯದ ಹಿತದೃಷ್ಟಿಯಿಂದ ಪಾಟೀ ಸವಾಲು ಮಾಡಲು ಕಾಲವಕಾಶವನ್ನು ನೀಡಿ ಮುಂದಿನ ಮುದ್ದತ್ತಿಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

(ಶಿವಕುಮಾರ್ ಆರ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.